ಶ್ರೀ ಬ್ಲೆಸೀಯಸ್ ಎಂ. ಡಿಸೋಜ.—ಈ ವರ್ಷ ಹ್ಯಾಮಿಲ್ಟನ್ ಸರ್ಕಲನ್ನು ಮಾಡಲಿಕ್ಕೆ ಆದೇಶ ಕೊಡುತ್ತೀರಾ ? ಇಲ್ಲದಿದ್ದರೆ ಬರುವ ವರ್ಷ ಬಜೆಟ್‌ನಿಂದ ಹಣ ಬಿಡುಗಡೆ ಮಾಡುತ್ತೇವೆ. ಎಂದು ಭರವಸೆ ಕೊಡುತ್ತೀರಾ ?

ಶ್ರೀ ಹೆಚ್. ಡಿ. ದೇವೇಗೌಡ.—ಹಣಕಾಸಿನ ಪರಿಸ್ಥಿತಿ ಉತ್ತಮವಾದರೆ ಮಾಡಬಹುದು.

ಮಂಗಳೂರು ವಿಶ್ವವಿದ್ಯಾನಿಲಯದ ಬಗ್ಗೆ.

೨೬೫. ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ).—ಮಾನ್ಯ ಉಚ್ಚ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮಂಗಳೂರು ವಿಶ್ವ ವಿದ್ಯಾನಿಲಯಕ್ಕೆ ಆದರ ಪ್ರಾರಂಭವಾದುದಿನಿಂದ ೧೯೮೭ ನೇ ಮಾರ್ಚಿವರೆಗೆ ಸರ್ಕಾರದವರು ಮಾಡಿದ ವೆಚ್ಚ ವೆಷ್ಟು, ಹಾಗೂ ಇನ್ನು ಮಂದೆ ಮಾಡಲಿರುವ ವೆಚ್ಚದ ಯೋಜನೆಯೇನು ?

ಆ) ಈ ವಿಶ್ವ ವಿದ್ಯಾನಿಲಯಕ್ಕೆ ವಿಶ್ವ ವಿದ್ಯಾನಿಲಯಧನಸಹಾಯದ ಆಯೋಗದವರ ಅನುದಾನ ಸಿಕ್ಕಿದೆಯೇ ?

ಇ) ಹಾಗಿಲ್ಲದಿದ್ದಲ್ಲಿ ಅದನ್ನು ಎಂದು ಪಡೆದುಕೊಳ್ಳಲಾಗುವುದು ?

ಶ್ರೀ ಜೀವರಾಜ ಆಳ್ವ (ಉಚ್ಚ ಶಿಕ್ಷಣ ಮಂತ್ರಿಗಳು).—

ಅ) ಪ್ರಾರಂಭದಿಂದ ೧೯೮೭ ಮಾರ್ಚಿ ಕೊನೆಯವರೆಗೆ ರೂ. ೧೦,೩೦,೯೩,೧೫೮-೦೦ ವೆಚ್ಚವಾಗಿದೆ, ಹಾಗೂ ರೂ. ೨,೮೦,೪೫,೮೦೦-೦೦ ಖರ್ಚು ಮಾಡುವ ಯೋಜನೆಯಿದೆ.

ಆ) ಸಿಕ್ಕಿದೆ.

ಇ) ಉದ್ಭವಿಸುವುದಿಲ್ಲ.

ಶ್ರೀ ಬಿ. ಎಂ. ಇದ್ದಿನಬ್ಬ.—ನನಗೆ ಉತ್ತರದ ಪಟ್ಟಿ ಇನ್ನೂ ಬರಲಿಲ್ಲ. ಈವರೆಗೆ ಮಂಗಳೂರು ವಿಶ್ವ ವಿದ್ಯಾನಿಲಯಕ್ಕೆ ಆದ ವೆಚ್ಚದ ಕಾರ್ಯಗಳು ಸಮರ್ಪವಾಗಿ ನಡೆದಿವೆಯೇ ?

ಶ್ರೀ ಜೀವರಾಜ ಆಳ್ವ.—ಸಮರ್ಪಕವಾಗಿದೆ.

ಶ್ರೀ ಬಿ. ಎಂ. ಇದ್ದಿನಬ್ಬ.—ಇನ್ನು ಮುಂದಿನ ಯೋಜನೆಯ ಕೆಲಸಗಳು ಎಂದು ಪ್ರಾರಂಭವಾಗುತ್ತದೆ ಎಂತ್ತು ಯಾವುದಾದರೂ ಕೇಳಿಕೆಗಳು ಅಲ್ಲಿಂದ ಬಂದಿವೆಯೇ ?

ಶ್ರೀ ಜೀವರಾಜ ಆಳ್ವ.—೧೯೮೭-೮೮ರಲ್ಲಿ ೨ ಕೋಟಿ ೪೫ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಬೇಕು ಎಂದು ಯೋಜನೆ ಮಾಡಿದ್ದೇವೆ. ಆದರೂ ಕೂಡ ಯು. ಜಿ. ಸಿ. ಯಿಂದ ೭ನೇ ಪಂಚವಾರ್ಷಿಕ ಯೋಜನೆಯಲ್ಲಿ ೧ ಕೋಟಿ ೧೦ ಲಕ್ಷ ರೂಪಾಯಿಂಗಳು ಮಂಜೂರಾಗಿತ್ತು. ಆದರೆ ಬರೀ ೩೦ ಲಕ್ಷ ರೂಪಾಯಿಗಳನ್ನು ಅವರು ಕೊಟ್ಟಿದ್ದಾರೆ. ಇನ್ನೂ ಯು. ಜಿ. ಸಿ. ಯಿಂದ ಹಣ ಬರುವುದಿದೆ, ಬಂದರೆ ನಾವು ಯೋಜನೆಗಳನ್ನು ಏನು ಮಾಡಿದ್ದೇವೆ ಅದನ್ನೆಲ್ಲಾ ಪೂರ್ಣಗೊಳಿಸಲಿಕ್ಕೆ ಸಹಾಯವಾಗುತ್ತದೆ.

ಶ್ರೀ ಬಿ. ಎಂ. ಇದ್ದಿನಬ್ಬ,—ಮಾನ್ಯ ಅಧ್ಯಕ್ಷರೆ, ಇದುವರೆಗೂ ೧೦ ಕೋಟಿ ರೂಪಾಯಿಂಗಳು ಖರ್ಚಾಗಿದ್ದರೂ ಇನ್ನು ಅನೇಕ ಕಟ್ಟಡಗಳು ಅರ್ಧಂಭರ್ದವಾಗಿಯೇ ಉಳಿದಿವೆ. ಏತಕ್ಕೆ ಸಂಪೂರ್ಣವಾಗಿಲ್ಲ ಎನ್ನುವ ಸಂಶಯ ನನಗಿದೆ, ಇದರ ಬಗ್ಗೆ ಮಾನ್ಯ ಮಂತ್ರಿಗಳು ಸರಿಯಾಗಿ ಉತ್ತರ ಹೇಳಬೇಕು.

ಶ್ರೀ ಜೀವರಾಜ ಆಳ್ವ.—ಹಣಕಾಸಿನ ಕೊರತೆಯಿಂದ ಕಟ್ಟಡಗಳ ಕೆಲಸ ಮುಕ್ತಾಯವಾಗಿಲ್ಲ. ಈಗ ನಿಯೋಜಿಸಿರುವ ಎರಡು ಕೋಟಿ ರೂಪಾಯಿಗಳಲ್ಲಿ ವಿಶ್ವ ವಿದ್ಯಾನಿಲಯದ ಮೊದಲನೆಯ ಹಂತದ ಕೆಲಸ ಹಾಗೂ ಇತರ ಕಟ್ಟಡಗಳ ಕೆಲಸ ಮುಕ್ತಾಯವಾಗುತ್ತದೆ.